ರಸ್ತೆಗಳನ್ನು ರಿಪೇರಿ ಮಾಡಬೇಕು ಕೊಡಗು ಜಿಲ್ಲೆ ಮಾತ್ತವಲ್ಲ ತೀರ್ಥಹಳ್ಳಿ ಸೇರಿದಂತೆ ಮಲೆನಾಡು ಪ್ರದೇಶಕ್ಕೆ ಈ ಮಳೆ ಹಾನಿಯ ಹಿನ್ನೆಲೆಯಲ್ಲಿ ಹೆಚ್ಚಿನ ಹಣವನ್ನು ಕೊಡುತ್ತೀರಾ ಎನ್ನುವ ಪ್ರಶ್ನೆಯನ್ನು ಮಾನ್ಯ ಮುಖ್ಯಮಂತ್ರಿಗಳಲ್ಲಿ ನಾನು ಕೇಳಬಯಸುತ್ತೇನೆ

**ಶ್ರೀ ಸಿ ಟಿ ರವಿ** ಸಕಲೇಶಪುರ, ಅರಸೀಕೆರೆ ಮತ್ತು ಸೋಮವಾರ ಪೇಟೆ ಭಾಗಗಳಲ್ಲಿ ಯಾವುದೇ ಬೆಳೆ ಇಲ್ಲ, ಕಾಫಿ, ಮೆಣಸು ಒಂದು ಎಲೆಬಿಡದಂತೆ ಹಾಳಾಗಿ ಹೋಗಿದೆ

**ಉಪ ಸಭಾಧ್ಯಕ್ಷರು** ಈಗ ಇದನ್ನು ಅರ್ಧಗಂಟೆ ಚರ್ಚೆಗೆ ತೆಗೆದುಕೊಳ್ಳೋಣವೆ ?

**ಶ್ರೀ ಸಿ ಟಿ ರವಿ** ಅರ್ಧಗಂಟೆ ಚರ್ಚೆಗೆ ತೆಗೆದುಕೊಳ್ಳಬೇಕಾಗುತ್ತದೆ

**ಉಪ ಸಭಾಧ್ಯಕ್ಷರು** ಆಯಿತು ಬಿಡಿ

**ಹೊಸ ತಾಲ್ಲೂಕುಗಳ ರಚನೆ**

161 (1363) ಶ್ರೀ ಶಿವಾನಂದ ಎಸ್ ಪಾಟೀಲ್ (ಬಸವನಬಾಗೇವಾಡಿ) ಮಾನ್ಯ ಮುಖ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವವರೆ?

ಅ) ರಾಜ್ಯದಲ್ಲಿ ಸರ್ಕಾರ ಹೊಸದಾಗಿ ತಾಲ್ಲೂಕುಗಳನ್ನು ರಚನೆ ಮಾಡಿದೆಯೇ,

ಆ) ಹಾಗಿದ್ದಲ್ಲಿ ಹೊಸ ತಾಲ್ಲೂಕುಗಳನ್ನು ರಚಿಸಲು ಕೈಗೊಂಡ ಕ್ರಮವೇನು,

ಇ) ರಾಜ್ಯದಲ್ಲಿ ಯಾವ ಯಾವ ಹೊಸ ತಾಲ್ಲೂಕುಗಳನ್ನು ರಚಿಸಲಾಗುವುದು,

ಈ) ಯಾವ ಕಾಲಮಿತಿಯೊಳಗೆ ಹೊಸದಾಗಿ ತಾಲ್ಲೂಕುಗಳನ್ನು ರಚಿಸಲಾಗುವುದು ?

ಶ್ರೀ ಜಗದೀಶ್ ಶೆಟ್ಟರ್ (ಕಂದಾಯ ಸಚಿವರು)

ಅ) 1956 ರಲ್ಲಿ ಹೊಸ ಮೈಸೂರು ರಾಜ್ಯ ನಿರ್ಮಾಣವಾದ ನಂತರ ಸಣ್ಣಪುಟ್ಟ ಬದಲಾವಣೆಗಳನ್ನು ಮಾತ್ರ ತಾಲ್ಲೂಕು ಮಟ್ಟದಲ್ಲಿ ಮಾಡಲಾಗಿದೆ ಆದರೆ, ಜಿಲ್ಲೆಗಳ ಪುನರ್ ವಿಂಗಡಣೆಯನ್ನು ಮೂರು ಸಲ ಮಾಡಲಾಗಿದೆ 1950 ರ ದಶಕದಲ್ಲಿ ಸಮುದಾಯ ಅಭಿವೃದ್ಧಿ ಯೋಜನೆಗಳನ್ನು (Community Development Programs) ಜಾರಿಯಲ್ಲಿದ್ದಾಗಲೂ ಕೂಡ ಬೇರೆ ರಾಜ್ಯಗಳಲ್ಲಿ ತಾಲ್ಲೂಕುಗಳನ್ನು ವಿಭಜಿಸಿ ಅಭಿವೃದ್ಧಿ ಮಂಡಳಿಗಳನ್ನಾಗಿ (Development Block) ಮಾಡಲಾಗಿತ್ತು ಆದರೆ ಕರ್ನಾಟಕದಲ್ಲಿ ತಾಲ್ಲೂಕುಗಳನ್ನೆ Blockಗಳೆಂದು ಪರಿಗಣಿಸಲಾಯಿತು ಆಗಲೂ ಕೂಡ ತಾಲ್ಲೂಕುಗಳು ಪುನರ್

ರಚನೆ ಆಗಲಿಲ್ಲ ಶ್ರೀ ವಾಸುದೇವರಾವ್ ಸಮಿತಿಯು ಕೆಲವು ಸೂಚನೆಗಳನ್ನು ಮಾಡಿದ್ದರೂ ಕೂಡ ತಾಲ್ಲೂಕುಗಳ ಪುನರ್ ರಚನೆ ಕಾರ್ಯ ಕೈಗೊಳ್ಳಲಿಲ್ಲ ನಂತರ ಜಿಲ್ಲಾ ರಚನೆಗೆ ಸಂಬಂಧಿಸಿದಂತೆ ಹುಂಡೇಕರೆ ಹಾಗೂ ಗದ್ದಿಗೌಡರ್ ಸಮಿತಿಗಳು ಕೆಲವು ತಾಲ್ಲೂಕುಗಳ ರಚನೆಯ ಬಗ್ಗೆ ಮಾಡಿದ ಸೂಚನೆಗಳು ಕೂಡ ಜಾರಿಗೆ ಬರಲಿಲ್ಲ ಆದರೆ ಇತ್ತೀಚೆಗೆ 2001 ರಲ್ಲಿ ಬೆಂಗಳೂರು ಪೂರ್ವ ತಾಲ್ಲೂಕನ್ನು ಮಾತ್ರ ರಚಿಸಲಾಗಿದೆ

ಆ) ಸರ್ಕಾರವು ರಾಜ್ಯದಲ್ಲಿ ಹೊಸ ತಾಲ್ಲೂಕುಗಳನ್ನು ರಚಿಸುವ ಬಗ್ಗೆ ಪರಿಶೀಲಿಸುತ್ತಿದೆ ಈ ಬಗ್ಗೆ ತಜ್ಞರ ಸಮಿತಿಯನ್ನು ನೇಮಿಸಿ ಅದರ ವರದಿ ಬಂದ ನಂತರ ಅದನ್ನು ಸಮಗ್ರವಾಗಿ ಪರಿಶೀಲಿಸಿದ ನಂತರ ಹೊಸ ತಾಲ್ಲೂಕುಗಳ ರಚನೆ ಬಗ್ಗೆ ಕ್ರಮ ಕೈಗೊಳ್ಳಲಾಗುವುದು

ಇ) ತಜ್ಞರ ಸಮಿತಿಯನ್ನು ನೇಮಿಸಿ ಅದರ ವರದಿ ಬಂದ ನಂತರ ಪರಿಶೀಲಿಸಿನಿರ್ಧರಿಸಲಾಗುವುದು

ಈ) ಮೇಲೆ (ಇ) ನಲ್ಲಿನ ಉತ್ತರದಿಂದ ಉದ್ಭವಿಸುವುದಿಲ್ಲ

**ಶ್ರೀ ಶಿವಾನಂದ ಎಸ್ ಪಾಟೀಲ್** ಮಾನ್ಯ ಉಪ ಸಭಾಧ್ಯಕ್ಷರೆ, ಉತ್ತರವನ್ನು ಕೊಟ್ಟಿದ್ದಾರೆ, ಅದರಲ್ಲಿ ಆನಲ್ಲಿ ಸರ್ಕಾರವು ರಾಜ್ಯದಲ್ಲಿ ಹೊಸ ತಾಲ್ಲೂಕುಗಳನ್ನು ರಚಿಸುವ ಬಗ್ಗೆ ಪರಿಶೀಲಿಸುತ್ತಿದೆ ಈ ಬಗ್ಗೆ ತಜ್ಞರ ಸಮಿತಿಯನ್ನು ನೇಮಿಸಿ ಅದರ ವರದಿ ಬಂದ ನಂತರ ಅದನ್ನು ಸಮಗ್ರವಾಗಿ ಪರಿಶೀಲಿಸಿದ ನಂತರ ಹೊಸ ತಾಲ್ಲೂಕುಗಳ ರಚನೆ ಬಗ್ಗೆ ಕ್ರಮ ತೆಗೆದುಕೊಳ್ಳಲಾಗುವುದೆಂದು ಹೇಳಿದ್ದಾರೆ ನಾನು ಮಾನ್ಯ ಸಚಿವರಿಗೆ ಕೇಳುವುದಕ್ಕೆ ಇಷ್ಟ ಪಡುತ್ತೇನೆ ಈಗಾಗಲೇ ತಾಲ್ಲೂಕುಗಳು ಎಷ್ಟು ಆಗಬೇಕು, ಜಿಲ್ಲೆಗಳು ಎಷ್ಟು ಆಗಬೇಕು, ಡಿವಿಷನ್ಸ್ ಎಷ್ಟು ಆಗಬೇಕು, ಸಬ್ ಡಿವಿಷನ್ಸ್ ಎಷ್ಟು ಆಗಬೇಕು, ಎನ್ನತಕ್ಕಂತಹ ವರದಿಯನ್ನು ಶ್ರೀ ವಾಸುದೇವನ್ ಕಮ್ಮಿಟಿ ವರದಿ ಕೊಟ್ಟಿದೆ, ಹುಂಡೇಕರ್ ಸಮಿತಿ ವರದಿ ಕೊಟ್ಟಿದೆ, ಗದ್ದೀಗೌಡರ್ ಸಮಿತಿ ವರದಿ ಕೊಟ್ಟಿದೆ ಮತ್ತೊಂದು ತಜ್ಞರ ಸಮಿತಿ ನೇಮಿಸತಕ್ಕಂತಹ ಅವಶ್ಯಕತೆ ತಮಗೇನಿದೆ ಎಂದು ದಯಮಾಡಿ ತಾವು ಸಭೆಗೆ ತಿಳಿಸಬೇಕು ತಜ್ಞರ ಸಮಿತಿ ವರದಿ ಮೇಲೆ ತಾವೇನಾದರೂ ತಾಲೂಕುಗಳನ್ನು ಹಾಗೂ ಜಿಲ್ಲೆಗಳನ್ನು ರಚನೆ ಮಾಡುತ್ತಿದ್ದರೆ, ರಾಮನಗರ ಜಿಲ್ಲೆಯನ್ನು ಹೇಗೆ ರಚನೆ ಮಾಡಿದ್ದೀರಿ ಎಂದು ಸಭೆಗೆ ತಿಳಿಸಬೇಕು

**ಶ್ರೀ ಜಗದೀಶ್ ಶೆಟ್ಟರ್** ಮಾನ್ಯ ಉಪಾಧ್ಯಕ್ಷರೆ, ಹೊಸದಾಗಿ ಜಿಲ್ಲೆಗಳ ಸ್ಥಾಪನೆ ಆಯಿತು, ಹೊಸ ತಾಲ್ಲೂಕುಗಳನ್ನು ಮಾಡಬೇಕೆಂಬ ಬೇಡಿಕೆ ಬಹಳ ದಿವಸಗಳಿಂದ ಇಡೀ ರಾಜ್ಯದಲ್ಲಿ ಎಲ್ಲಾ ಭಾಗಗಳಲ್ಲಿ ಹಾಗೂ ಎಲ್ಲಾ ಜಿಲ್ಲೆಗಳಲ್ಲಿಯೂ ಇದೆ ಈ ಸರ್ಕಾರ ಕೂಡ ಹೊಸ ತಾಲ್ಲೂಕುಗಳನ್ನು ರಚನೆ ಮಾಡುವ ಬಗ್ಗೆ ಅದರ ಪರವಾಗಿದೆ ನಾವೂ ಕೂಡ ಅದರ ಪರವಾಗಿದ್ದೇವೆ

ಅದರ ಬಗ್ಗೆ ನಾವು ಚಿಂತನೆಯನ್ನು ಮಾಡುತ್ತಿದ್ದೇವೆ. ಮಾನ್ಯ ಶಿವಾನಂದ ಪಾಟೀಲರು ಏನು ಪ್ರಶ್ನೆ ಕೇಳಿದ್ದಾರೆ, ಇದರ ಬಗ್ಗೆ ಪರಿಶೀಲನೆ ಮಾಡುತ್ತೇವೆ ಹೊಸ ತಜ್ಞರ ಕಮಿಟಿ ಏಕೆ ಮಾಡುತ್ತೇವೆಂದರೆ, 1973ರಲ್ಲಿ ವಾಸುದೇವನ್‌ರವರ ಒಂದು ಕಮಿಟಿ ಆಗಿತ್ತು 1984 ರಲ್ಲಿ ಬಿ ಎಮ್ ಹುಂಡೇಕಾರ್‌ರವರ ಒಂದು ಕಮಿಟಿ ಆಯಿತು 1986 ರಲ್ಲಿ ಡಿ ಸಿ ಗದ್ದೀಗೌಡರ ಕಮಿಟಿ ಆಯಿತು ಅವರೆಲ್ಲಾ ವರದಿ ಕೊಟ್ಟಿದ್ದಾರೆ ಆ ವರದಿ ಸರ್ಕಾರದ ಅಧೀನದಲ್ಲಿದೆ ಈ ವರದಿಗಳು ಬಂದು 20 ವರ್ಷಗಳ ಮೇಲ್ಪಟ್ಟಾಯಿತು ಮೊದಲನೇ ವರದಿ ಬಂದು 30 ವರ್ಷಗಳ ಮೇಲಾಯಿತು ಅದಾದ ಮೇಲೆ ಇವತ್ತು ಜನಸಂಖ್ಯೆಯಲ್ಲಿ ಬದಲಾವಣೆ, ಏರಿಯಾದಲ್ಲಿ ಬದಲಾವಣೆ, ನಾವು ಹೊಸದಾಗಿ ತಾಲ್ಲೂಕುಗಳನ್ನು ಮಾಡಬೇಕಾದರೆ ಮತ್ತೊಂದು expert committee ಮಾಡಲೇಬೇಕಾಗುತ್ತದೆ ಹಿಂದಿನ ಕಮಿಟಿಗಳು ಆಗಿ 20 ವರ್ಷಗಳಾಗಿವೆ ಆಗಿನ ಸರ್ಕಾರ ಈ ವರದಿಗಳ ಮೇಲೆ ಕ್ರಮ ತೆಗೆದುಕೊಂಡಿದ್ದರೆ ಮತ್ತೊಮ್ಮೆ ಕಮಿಟಿ ಮಾಡುವ ಅವಶ್ಯಕತೆ ಇರಲಿಲ್ಲ 20 ವರ್ಷಗಳ ನಂತರ ನಾವು ವಿಚಾರ ಮಾಡುತ್ತಿದ್ದೇವೆ ಹೀಗಾಗಿ ಮತ್ತೊಂದು ಕಮಿಟಿ ಮಾಡಬೇಕಾಗುತ್ತದೆ ಹೊಸ ಕಮಿಟಿ ಮಾಡಿ, ಹಿಂದಿನ ಕಮಿಟಿಯವರು ಏನು ವರದಿ ಕೊಟ್ಟಿದ್ದಾರೆ, ಆ ವರದಿಯನ್ನೂ consider ಮಾಡಿ, ಆ ವರದಿಯಲ್ಲಿ ಕೆಲವು ಸಲಹೆಗಳನ್ನು ಕೊಟ್ಟಿದ್ದಾರೆ, ಯಾವ ಯಾವ ತಾಲ್ಲೂಕುಗಳನ್ನು ಮಾಡಬೇಕೆಂದು ಹೇಳಿದ್ದಾರೆ ಅದನ್ನೂ ಕೂಡ ಅವರು ಪರಿಶೀಲನೆ ಮಾಡುತ್ತಾರೆ ಹಿಂದಿನ ವರದಿಗಳ ಪ್ರಕಾರ 25 ರಿಂದ 30 ತಾಲ್ಲೂಕುಗಳನ್ನು ಮಾಡಬೇಕೆಂದು ವರದಿ ಇತ್ತು ಇಡೀ ರಾಜ್ಯದಲ್ಲಿ 85 ರಿಂದ 90 ಸ್ಥಳಗಳಲ್ಲಿ ಹೊಸ ತಾಲ್ಲೂಕುಗಳನ್ನು ಮಾಡಬೇಕೆಂದು ಬೇಡಿಕೆ ಇದೆ ಇವುಗಳನ್ನೆಲ್ಲಾ ಪರಿಶೀಲನೆ ಮಾಡಬೇಕೆಂದರೆ, ತಜ್ಞರ ಸಮಿತಿ ಮಾಡಲೇಬೇಕಾಗುತ್ತದೆ ಅದನ್ನು consider ಮಾಡುತ್ತೇವೆ ಎನ್ನುವಂತಹ ಮಾತನ್ನು ಹೇಳುತ್ತೇನೆ

**ಶ್ರೀ ವಾಟಾಳ್ ನಾಗರಾಜ್** ಮಾನ್ಯ ಉಪಾಧ್ಯಕ್ಷರೆ, ಹಳೆಯ ಸಮಿತಿಗಳನ್ನು ಮಾಡಿ 20 ವರ್ಷಗಳಾದವು, ಜನಸಂಖ್ಯೆ ಆಧಾರದ ಮೇಲೆ ಹೊಸ ಸಮಿತಿಗಳನ್ನು ಮಾಡಬೇಕೆಂದು ಹೇಳಿದಿರಿ, ಜಿಲ್ಲೆಗಳನ್ನು ಮಾಡಿರುವುದರ ಬಗ್ಗೆ ಮತ್ತು ತಾಲ್ಲೂಕುಗಳನ್ನು ಮಾಡಿರುವುದರ ಬಗ್ಗೆ ನಮ್ಮ ತಕರಾರು ಏನೂ ಇಲ್ಲ ರಾಮನಗರ ಮತ್ತು ಚಿಕ್ಕಬಳ್ಳಾಪುರಗಳನ್ನು ಜಿಲ್ಲೆಗಳನ್ನಾಗಿ ಮಾಡಿದರಲ್ಲಾ, ಇದಕ್ಕೆ ಯಾವ ಸಮಿತಿ ರಚನೆ ಮಾಡಿದಿರಿ, ಯಾವ ಸಮಿತಿಯವರು ನಿಮಗೆ ಈ ಜಿಲ್ಲೆಗಳನ್ನು ಮಾಡುವುದಕ್ಕೆ ಅಧಿಕಾರ ಕೊಟ್ಟವರು? ರಾಮನಗರ ಹಾಗೂ ಚಿಕ್ಕಬಳ್ಳಾಪುರ ಜಿಲ್ಲೆಗಳಾಗಿದ್ದು ಬಹಳ ಸಂತೋಷ ಕನಕಪುರ ಕೂಡ ಜಿಲ್ಲೆಯಾಗಲಿ ಅದಕ್ಕೆ ನಮ್ಮ ಅಭ್ಯಂತರವೇನೂ ಇಲ್ಲ ಈ ಜಿಲ್ಲೆಗಳನ್ನು

ಮಾಡುವುದಕ್ಕೆ ಯಾವ ಕಮಿಟಿಯವರು ಶಿಫಾರಸ್ಸು ಮಾಡಿದರು ಎಂದು ಸ್ಪಷ್ಟವಾಗಿ, ಪ್ರಾಮಾಣಿಕವಾಗಿ ಹೇಳಿ ಹೊಳೆನರಸೀಪುರವನ್ನೂ ನೀವು ಜಿಲ್ಲೆ ಮಾಡಿ ಶಿಕಾರಿಪುರವನ್ನೂ ಜಿಲ್ಲೆ ಮಾಡಿ ನಮಗೇನೂ ಅಭ್ಯಂತರವಿಲ್ಲ

**ಉಪಾಧ್ಯಕ್ಷರು** ಅವರ ಪ್ರಶ್ನೆಗೆ ಒಬ್ಬರು ಇಬ್ಬರು ಉಪ ಪ್ರಶ್ನೆ ಕೇಳಬಹುದು ಎಲ್ಲರೂ ಕೈ ಎತ್ತುತ್ತಿದ್ದರೆ ಯಾರಿಗೆ ಅವಕಾಶ ಕೊಡುವುದು? ನಾನೂ ನಿಮ್ಮ ಜೊತೆ ಕೈ ಎತ್ತಬೇಕಾಗುತ್ತದೆ ಭಾಗೀರಥಿಯವರು ಪ್ರಶ್ನೆ ಕೇಳಿ ಅವರೂ ಪ್ರಶ್ನೆ ಕೇಳಲಿ ಎಲ್ಲಾ ಉತ್ತರಗಳನ್ನು ಒಟ್ಟಿಗೆ ಕೊಡುತ್ತಾರೆ

**ಶ್ರೀ ವಾಟಾಳ್ ನಾಗರಾಜ್** ಅವರು ಬೇರೆ ಪ್ರಶ್ನೆ ಕೇಳುತ್ತಾರೆ ನಾನು ಮತ್ತೊಮ್ಮೆ ನಿಮ್ಮ ಗಮನಕ್ಕೆ ತರುತ್ತೇನೆ

**ಉಪಾಧ್ಯಕ್ಷರು** ತೊಂದರೆ ಮಾಡಬೇಡಿ 11 30 ಗಂಟೆಗೆ ಪ್ರಾರಂಭವಾಗಿ, 12 30 ಗಂಟೆ ಆಗಿದೆ ಕುಳಿತುಕೊಳ್ಳಿ ಎಂದು ಹೇಳಿದರೆ ಯಾರೂ ಕುಳಿತುಕೊಳ್ಳಲಿಲ್ಲವೆಂದರೆ ನಾನು ಏನು ಮಾಡುವುದು?

**ಶ್ರೀ ಆರ್ ದ್ರುವನಾರಾಯಣ** ಕಳೆದ ಅಸೆಂಬ್ಲಿಯಲ್ಲಿ ನಾನು ಪ್ರಶ್ನೆ ಕೇಳಿದ್ದೆ ಕ್ಷೇತ್ರ ಪುನರ್ವಿಂಗಡಣೆ

**ಉಪಾಧ್ಯಕ್ಷರು** ಕುಳಿತುಕೊಳ್ಳಿ ಎಂದು ಹೇಳಿದರೂ ಕುಳಿತುಕೊಳ್ಳಲಿ ಲ್ಲವೆಂದರೆ ನಾನು ಏನು ಮಾಡಲಿ? ನಿಮ್ಮ ಪ್ರಶ್ನೆಗೆ ಉತ್ತರ ಕೊಡುವಾಗ ಅವರಿಗೆ ಕುಳಿತುಕೊಳ್ಳಿ ಎಂದು ಹೇಳಿದರೂ ಕುಳಿತುಕೊಳ್ಳುವುದಿಲ್ಲ ನಾನು ಏನು ಮಾಡಬೇಕು?

**ಶ್ರೀ ವಾಟಾಳ್ ನಾಗರಾಜ್** ತಾವು ಏನು ಮಾಡಬೇಕೆಂದು ನಾನು ಹೇಳುವುದಕ್ಕೆ ಬರುವುದಿಲ್ಲ ತಾವು ಅವರಿಗೆ ಹೇಳಿ ನನ್ನ ಪ್ರಶ್ನೆಗೆ ಉತ್ತರ ಕೊಡುತ್ತಿದ್ದಾರೆ,

**ಉಪಾಧ್ಯಕ್ಷರು** ಸಾಕಷ್ಟು ಬೇಡಿಕೆಗಳಿವೆ ಅದರಲ್ಲಿ ಸೇರಿಸಿಕೊಂಡು ಅವರು ಮಾತನಾಡುವಾಗ ಮಾತನಾಡಿದರೆ ಆಯಿತು ಯಾವುದೇ ಪ್ರಶ್ನೆ ಬಂದರೂ ಎಲ್ಲರೂ ಕೈ ಎತ್ತುವುದು

**ಶ್ರೀ ಜಗದೀಶ್ ಶೆಟ್ಟರ್** ಮಾನ್ಯ ಉಪಾಧ್ಯಕ್ಷರೆ, ಮಾನ್ಯ ವಾಟಾಳ್ ನಾಗರಾಜ್‌ರವರು ಏನು ಪ್ರಶ್ನೆಯನ್ನು ಕೇಳಿದ್ದಾರೆ, ಚಿಕ್ಕಬಳ್ಳಾಪುರ ಮತ್ತು ರಾಮನಗರ ಈ ಜಿಲ್ಲೆಗಳನ್ನು ಮಾಡುವ ಸಂದರ್ಭದಲ್ಲಿ ಹೊಸ ಜಿಲ್ಲೆಗಳನ್ನು ಮಾಡುವ ಬಗ್ಗೆ ಡಾ ಬಾಲಸುಬ್ರಮಣ್ಯ ನಿವೃತ್ತ IAS ಅಧಿಕಾರಿ ಅವರ ಅಧ್ಯಕ್ಷತೆಯಲ್ಲಿ ಸರ್ಕಾರ ಒಂದು ಸಮಿತಿಯನ್ನು ಮಾಡಿತ್ತು ಅದರಲ್ಲಿ ಇನ್ನಿರಾಯರವರು ಸದಸ್ಯರಾಗಿದ್ದರು, ಮತ್ತು ಚಿರಂಜೀವಿಸಿಂಗ್‌ರವರು ಕೂಡ ಸದಸ್ಯರಾಗಿದ್ದರು ಈ ಕಮಿಟಿ ಅವರ ವರದಿ ಕೊಟ್ಟ ನಂತರ ಆ ವರದಿ ಆಧಾರದ ಮೇಲೆ ರಾಮನಗರ ಮತ್ತು ಚಿಕ್ಕಬಳ್ಳಾಪುರ ಜಿಲ್ಲೆಗಳನ್ನು ನಾವು ಘೋಷಣೆ ಮಾಡಿದ್ದೇವೆ

**ಶ್ರೀ ವಾಟಾಳ್ ನಾಗರಾಜ್** ಈ ಸಮಿತಿಗಳನ್ನು ಮಾಡಿದ್ದು ನನಗೆ ಗೊತ್ತಿಲ್ಲವೆಂದು ಹೇಳಿದ್ದಾರೆ 20 ವರ್ಷಗಳಾದವು ಎಂದು ಹೇಳಿದ್ದಾರೆ ಈಗ ಮತ್ತೆ ಅದಕ್ಕೆ ಒಂದು ಕಥೆ ಹೇಳುತ್ತಿದ್ದಾರೆ, ಇದರ ಅರ್ಥವೇನು? ಆ ಎರಡೂ ಜಿಲ್ಲೆಗಳನ್ನು ಮಾಡುವುದಕ್ಕೆ ಒಂದು ಸಮಿತಿ ಮಾಡಿದಿರಾ? ಚಿಕ್ಕಬಳ್ಳಾಪುರ, ಮತ್ತು ರಾಮನಗರ ಜಿಲ್ಲೆಗಳನ್ನು ಮಾಡುವುದಕ್ಕಾಗಿ ಸಮಿತಿಯನ್ನು ನೇಮಕ ಮಾಡಿದ್ದಿರಾ? ಈ ರಾಜ್ಯದ ಎಲ್ಲಾ ಜಿಲ್ಲೆಗಳಿಗೂ ಮಾಡಿದ್ದಿರಾ? ಆ ಸಮಿತಿ ವರದಿ ಏನು ಈ ಸಭೆಯ ಮುಂದಡಿ ರಾಮನಗರ ಜಿಲ್ಲೆ ಆಗುವುದಕ್ಕೆ ನಮ್ಮ ತಕರಾರು ಇಲ್ಲ ಸಮಿತಿ ಏನು ವರದಿ ಕೊಟ್ಟಿದೆ ಅದನ್ನು ಸದನದ ಮುಂದೆ ಇಡಿ

**ಶ್ರೀ ಎಸ್ ಶಿವಾನಂದ ಪಾಟೀಲ್** ಮಾನ್ಯ ಉಪಾಧ್ಯಕ್ಷರೆ, ಮಾನ್ಯ ಜಗದೀಶ್ ಶೆಟ್ಟರ್‌ರವರಲ್ಲಿ ನಾನು ವಿನಂತಿ ಮಾಡಿಕೊಳ್ಳುತ್ತೇನೆ, ಈ ವಾಸುದೇವನ್ ಕಮಿಟಿ ವರದಿಯನ್ನು, ಹುಂಡೇಕರ್ ಕಮಿಟಿ ವರದಿಯನ್ನು ಮತ್ತಿ ಗದೀಗೌಡರ್ ಸಮಿತಿ ವರದಿಯನ್ನು ಕಸದ ಬುಟ್ಟಿಗೆ ಹಾಕಿ ಈ ಎರಡು ಜಿಲ್ಲೆಗಳ ಸಲುವಾಗಿ ಹೊಸ ಸಮಿತಿ ನೇಮಕ ಮಾಡಿದ್ದೀರಾ? ಮಾನ್ಯ ವಾಟಾಳ್ ನಾಗರಾಜ್‌ರವರು ಅದನ್ನೇ ಕೇಳುತ್ತಿರುವುದು 1975 ರಿಂದ 87 ರವರೆಗೆ ನೀವು ಕಮಿಟಿಗಳನ್ನು ನೇಮಕ ಮಾಡಿದ್ದೀರಿ ಆ ಮೂರು ಕಮಿಟಿಗಳಿಗೆ ಏನು sanctity ಉಳಿಯಿತು? ಆ ಕಮಿಟಿಗಳ ವರದಿಗಳನ್ನು implement ಮಾಡದೇ ಹೊಸದಾಗಿ ರಾಮನಗರ ಮತ್ತು ಚಿಕ್ಕಬಳ್ಳಾಪುರಕ್ಕೆ ಒಂದು ಹೊಸ ಸಮಿತಿ ಮಾಡಿಕೊಂಡು ಅದಕ್ಕೆ ಕೊಟ್ಟರೆ, ಗುಲ್ಬರ್ಗ ಜಿಲ್ಲೆಯವರು ಏನು ತಪ್ಪು ಮಾಡಿದ್ದರು ಎಂದು ತಾವು ಹೇಳಬೇಕು

**ಶ್ರೀ ಜಗದೀಶ್ ಶೆಟ್ಟರ್** ಮಾನ್ಯ ಉಪಾಧ್ಯಕ್ಷರೆ, ಮಾನ್ಯ ಶಿವಾನಂದ ಪಾಟೀಲರು ಏನು ಹೇಳಿದರು, ವಾಸುದೇವನ್ ಕಮಿಟಿ ಇರಬಹುದು, ಹುಂಡೇಕರ್ ಮತ್ತು ಗದ್ದೀಗೌಡರ್ ಕಮಿಟಿ ಏನಿವೆ, ಅವರು ಏನು ವರದಿ ಕೊಟ್ಟಿದ್ದಾರೆ, ಅದನ್ನು ಕಸದ ಬುಟ್ಟಿಗೆ ಹಾಕುವುದಲ್ಲ ಆ ವರದಿಗಳನ್ನೂ consider ಮಾಡುತ್ತೇವೆ ಆ ವರದಿಯಲ್ಲಿ ಏನು ಸಲಹೆ ಸೂಚನೆಗಳನ್ನು ಕೊಟ್ಟಿದ್ದಾರೆ, ಅದನ್ನೂ ಕೂಡ ನೋಡುತ್ತೇವೆ ಹೊಸ ಸಮಿತಿ ಅದನ್ನೂ ಪರಿಶೀಲಿಸುತ್ತದೆ

**ಶ್ರೀ ಎಸ್ ಶಿವಾನಂದ ಪಾಟೀಲ್** ಈ ಮೂರು ಕಮಿಟಿಗಳ ವರದಿಯನ್ನು ಇನ್ನು ಪಾರ್ಷಿಯಲಿ ಕೂಡ implement ಆಗಿಲ್ಲ ವಾಸುದೇವನ್ ರವರು 194

**ಉಪಾಧ್ಯಕ್ಷರು** ಇಂತಹ ಪ್ರಶ್ನೆಗಳನ್ನು ಹಾಕಿ ಒಂದು ಗಂಟೆಯವರೆಗೆ ಇದರ ಬಗ್ಗೆ ಚರ್ಚೆ ಮಾಡಿದರೆ, ಇದರ ಮೇಲೆ ಚರ್ಚೆಯಾಗುವುದಕ್ಕೆ ಒಂದು ವಾರ ಕಾಲಾವಕಾಶ ಬೇಕಾಗುತ್ತದೆ ಪ್ರಶ್ನೆ ಕೇಳಿ ಅದರ ಮೇಲೆ ಅರ್ಧ ಗಂಟೆ

ಮುಕ್ತಾಲು ಗಂಟೆ ಚರ್ಚೆ ಮಾಡಿದರೆ ಹೇಗೆ? ಬೇರೆ ರೀತಿಯಲ್ಲಿ ನೀವು ಆ ಪ್ರಶ್ನೆಯನ್ನು ಕೇಳಬಹುದು

**ಶ್ರೀ ಎಸ್ ಶಿವಾನಂದ ಪಾಟೀಲ್** ಬೇರೆ ರೀತಿ ಅಲ್ಲ, ನಾವು ಬಹಳ specific ಆಗಿ ಕೇಳಿದ್ದೇವೆ ತಾವು ಬೇಕಾದರೆ ಓದಿ ನೋಡಿ ನಾವು ಹೇಳುತ್ತಿರುವುದು ಇಷ್ಟೆ ಈ ಮೂರೂ ಸಮಿತಿಯವರು ವರದಿ ಕೊಟ್ಟು ಆದ ಮೇಲೆ, ಆ ಜಿಲ್ಲೆಗಳ ರಚನೆ ಆಗಿಲ್ಲ ಆ ತಾಲ್ಲೂಕುಗಳ ರಚನೆಯಾಗಿಲ್ಲ ಆ ಸಬ್ ಡಿವಿಷನ್‌ಗಳು ರಚನೆಯಾಗಿಲ್ಲ ಹಾಗಾದರೆ ಈ ಚಿಕ್ಕಬಳ್ಳಾಪುರ ಮತ್ತು ರಾಮನಗರ ಹೇಗೆ ರಚನೆ ಆಗುತ್ತದೆ ಎಂದು ತಾವು ಹೇಳಬೇಕು ತಾವು ಇದನ್ನೇಕೆ ಸಮರ್ಥನೆ ಮಾಡಿಕೊಳ್ಳುತ್ತೀರಿ?

**ಶ್ರೀ ಜಗದೀಶ್ ಶೆಟ್ಟರ್** ಸನ್ಮಾನ್ಯ ಉಪಾಧ್ಯಕ್ಷರೆ, ರಾಮನಗರ ಮತ್ತು ಚಿಕ್ಕಬಳ್ಳಾಪುರ ಜಿಲ್ಲೆಗಳನ್ನು ಮಾಡುವಂತಹ ಸಂದರ್ಭದಲ್ಲಿ ಜಿಲ್ಲೆಗಳ ಪುನರ್ವಿಂಗಡೆ ಮಾಡುವುದಕ್ಕಾಗಿ ಶ್ರೀ ಬಾಲಸುಬ್ರಹ್ಮಣ್ಯಂರವರ ಅಧ್ಯಕ್ಷತೆಯಲ್ಲಿ ಸರ್ಕಾರ ಸಮಿತಿ ರಚನೆ ಮಾಡಿತ್ತು ಅದರಲ್ಲಿ ಗುಲ್ಬರ್ಗ ಮತ್ತು ಬೆಳಗಾವಿ ಜಿಲ್ಲೆಗಳು ಕೂಡ ಇದ್ದವು ಕೇವಲ ಚಿಕ್ಕಬಳ್ಳಾಪುರ ಮತ್ತು ರಾಮನಗರ ಅಷ್ಟೆ ಇರಲಿಲ್ಲ, ಬೆಳಗಾವಿ ಮತ್ತು ಗುಲ್ಬರ್ಗ ಕೂಡ ಅದರಲ್ಲಿ reference point ಇದೆ ಈ ಜಿಲ್ಲೆಗಳ ಬಗ್ಗೆ ವರದಿ ಕೊಟ್ಟಿದ್ದಾರೆ ಬೆಳಗಾಂನಲ್ಲಿ ಬೇರೆ ಬೇರೆ ಅಭಿಪ್ರಾಯಗಳು ಬಂದವು

**ಶ್ರೀ ಎಸ್ ಶಿವಾನಂದ ಪಾಟೀಲ್** ಚಿಕ್ಕೋಡಿ ಆಗಬೇಕು, ಗುಲ್ಬರ್ಗದಲ್ಲಿ ಯಾವುದಾದರೂ ಒಂದು ಜಿಲ್ಲೆ ಆಗಬೇಕು

**ಶ್ರೀ ಜಗದೀಶ್ ಶೆಟ್ಟರ್** Terms of reference ನಲ್ಲಿ ಗುಲ್ಬರ್ಗ ಮತ್ತು ಬೆಳಗಾವಿ ಜಿಲ್ಲೆಗಳೂಕೂಡ ಇದ್ದವು ತಾಲ್ಲೂಕುಗಳ ಬಗ್ಗೆ ಕೂಡ ಹೇಳಿದ್ದರು

**ಶ್ರೀ ಎಸ್ ಶಿವಾನಂದ ಪಾಟೀಲ್** ಉತ್ತರ ಕರ್ನಾಟಕದ ಯಾವ ಜಿಲ್ಲೆ ಬಹಳ ಪ್ರಾಮುಖ್ಯವಾಗಿ ಜಿಯಾಗ್ರಫಿಕಲಿ ದೊಡ್ಡ ಜಿಲ್ಲೆಗಳು ಅವುಗಳನ್ನು ಹೊಡೆಯಬೇಕಾದ ಅವಶ್ಯಕತೆ ಇದೆ ಅವುಗಳನ್ನು ಬಿಟ್ಟು ನೀವು

**ಶ್ರೀ ಜಗದೀಶ್ ಶೆಟ್ಟರ್** ಮಾನ್ಯ ಉಪಾಧ್ಯಕ್ಷರೆ, ತಾಲ್ಲೂಕುಗಳ ಬಗ್ಗೆ ಕೇಳಿದರು, ಹಿಂದಿನ ಕಮಿಟಿಗಳು ಏನು ವರದಿಯನ್ನು ಕೊಟ್ಟಿದ್ದಾರೆ, ಅದನ್ನೂ consider ಮಾಡುತ್ತೇವೆ ಹೊಸದಾಗಿ ಕೂಡ ಬೇಡಿಕೆಗಳು ಬಂದಿವೆ

**ಶ್ರೀ ಎಸ್ ಶಿವಾನಂದ ಪಾಟೀಲ್** ಯಾವಾಗ ಸ್ವಾಮಿ?

**ಶ್ರೀ ವಾಟಾಳ್ ನಾಗರಾಜ್** ಬಾಲಸುಬ್ರಹ್ಮಣ್ಯ ಕಮಿಟಿಯವರು ಕತ್ತಲಿನಲ್ಲಿ ಕುಳಿತಿದ್ದಾರಾ? ಯಾರಿಂದಲಾದರೂ ಮನವಿಗಳನ್ನು ಸ್ವೀಕಾರ ಮಾಡಿದ್ದಾರಾ? ಯಾರನ್ನು ಕೇಳಿದರು? ಈ ರಾಜ್ಯದಲ್ಲಿ ಸಮಿತಿ ಯಾವಾಗ ನೇಮಕವಾಯಿತು ಹೇಳೀ

**ಡಾ॥ ಶರಣಪ್ರಕಾಶ್ ರುದ್ರಪ್ಪ ಪಾಟೀಲ್** ಮಾನ್ಯ ಉಪಾಧ್ಯಕ್ಷರೆ, ಗುಲ್ಬರ್ಗ ಜಿಲ್ಲೆಯ ಬಗ್ಗೆ ಏಕೆ ತೀರ್ಮಾನ ತೆಗೆದುಕೊಳ್ಳಲಿಲ್ಲವೆಂದು ಹೇಳಬೇಕು

**ಶ್ರೀಮತಿ ಭಾಗೀರಥಿ ಟಿ** ಮಾನ್ಯ ಉಪಾಧ್ಯಕ್ಷರೆ, ನನ್ನ ಕ್ಷೇತ್ರದಲ್ಲಿ ಧರಣಿ ಕುಳಿತು ಒಂದು ತಿಂಗಳಾಯಿತು ಮಾನ್ಯ ಸಚಿವರನ್ನು ಕೂಡ ನನ್ನ ಕ್ಷೇತ್ರದ ಜನ ಬಂದು ಕಂಡಿದ್ದಾರೆ ಎಲ್ಲಾ ಸಮಿತಿಗಳ ವರದಿಗಳ ಆಧಾರದ ಮೇಲೆ ಮಾಡುತ್ತಿದೀರಿ ಎಂದಾದರೆ, ನನ್ನ ಕ್ಷೇತ್ರಕ್ಕೂ ವಿಶೇಷ ತಹಶೀಲ್ದಾರ್‌ರನ್ನು ನೇಮಕ ಮಾಡಿ ವಿಶೇಷ ತಹಶೀಲ್ದಾರರನ್ನು ನೇಮಕ ಮಾಡುವವರೆಗೂ ಮುಷ್ಕರವನ್ನು ನಿಲ್ಲಿಸುವುದಿಲ್ಲವೆಂದು ಮುಷ್ಕರವನ್ನು ಮುಂದುವರೆಸಿದ್ದಾರೆ ಮೊನ್ನೆ ನಮ್ಮ ಜಿಲ್ಲಾ ಉಸ್ತುವಾರಿ ಸಚಿವರೂ ಕೂಡ ಅಲ್ಲಿಗೆ ಭೇಟಿಯನ್ನು ಕೊಟ್ಟಿದ್ದರು ನೀವು ಮತ್ತೆ ವಿಶೇಷ ತಜ್ಞರ ಸಮಿತಿ ನೇಮಕ ಮಾಡಿ ಇಡೀ ರಾಜ್ಯದಲ್ಲಿ ಎಲ್ಲೆಲ್ಲಿ ಆಗಬೇಕು ಎಂದು ಆ ಸಮಿತಿಯಿಂದ ವರದಿಯನ್ನು ತರಿಸಿಕೊಳ್ಳುತ್ತೀರ? ಆ ಸಂದರ್ಭದಲ್ಲಿ ನಮ್ಮ ಕ್ಷೇತ್ರವನ್ನು consider ಮಾಡುತ್ತೀರ? ಈಗ ನನ್ನ ಕ್ಷೇತ್ರದ ಜನರನ್ನು ಮುಷ್ಕರ ಕೈಬಿಡುವಂತೆ ಮಾಡಲು ಸರ್ಕಾರದ ಕಡೆಯಿಂದ ಈಗ ಏನು ವ್ಯವಸ್ಥೆಯನ್ನು ಮಾಡುತ್ತೀರಿ ಎಂಬುದನ್ನು ಮಾನ್ಯ ಮಂತ್ರಿಗಳು ಹೇಳಬೇಕೆಂದು ವಿನಂತಿ ಮಾಡುತ್ತೇನೆ

**ಶ್ರೀ ಶಿವಾನಂದ ಎಸ್ ಪಾಟೀಲ್** ಮಾನ್ಯ ಸಚಿವರೆ, ತಾವು ಹೊಸ ಜಿಲ್ಲೆ ರಚನೆ ಮಾಡುವುದಿಲ್ಲವೆಂದು ದೆಹಲಿಯಲ್ಲಿ ಒಂದು ಸ್ಟೇಟ್‌ಮೆಂಟ್ ಕೊಡುತ್ತೀರಿ ಇಲ್ಲಿ ಬಂದು ಹುಂಡೇಕಾರ್ ಸಮಿತಿ ವರದಿಯನ್ನು consider ಮಾಡುತ್ತೇವೆ ಎಂದು ಹೇಳುತ್ತೀರಿ ತಾವು ಕೊಟ್ಟಿರುವ ಸ್ಟೇಟ್‌ಮೆಂಟ್ ಇಲ್ಲಿಯೇ ಇದೆ

**ಶ್ರೀ ಕೆ ಜಯಪ್ರಕಾಶ್ ಹೆಗಡೆ** ಮಾನ್ಯ ಉಪಾಧ್ಯಕ್ಷರೆ, ತಾಲ್ಲೂಕನ್ನು ಮಾಡುವುದಕ್ಕೆ ವಿಶೇಷ ತಹಶೀಲ್ದಾರ್ ನೇಮಕವನ್ನು ಮಾಡಲಾಗಿದೆ ಅದನ್ನೆಲ್ಲ ಏನು ಮಾಡುತ್ತೀರಿ? ಅದು ಬೇಡವೇ? ನೀವು ಹಿಂದಿನ ವರದಿಯನ್ನು ತೆಗೆದುಕೊಳ್ಳುವುದಿಲ್ಲ ಎನ್ನುವುದಾದರೆ ಈಗಾಗಲೇ ತಾಲ್ಲೂಕು ರಚನೆ ಮಾಡುವುದಕ್ಕೋಸ್ಕರ ವಿಶೇಷ ತಹಶೀಲ್ದಾರ್‌ರನ್ನು ನೇಮಕ ಮಾಡಲಾಗಿದೆ ಅದನ್ನು ತಾವೇನು ಮಾಡುತ್ತೀರಿ?

**ಶ್ರೀ ಜಗದೀಶ್ ಶೆಟ್ಟರ್** consider ಮಾಡುವು ದಿಲ್ಲವೆಂದು ಹೇಳಲಿಲ್ಲ ಹಿಂದಿನ ವರದಿಯನ್ನೂ consider ಮಾಡುತ್ತೇವೆ ಇವೊತ್ತು ಇಡೀ ರಾಜ್ಯದಲ್ಲಿ 80 ರಿಂದ 90 ಸ್ಥಳಗಳಲ್ಲಿ ಹೊಸ ತಾಲ್ಲೂಕುಗಳನ್ನು ಮಾಡಬೇಕೆಂದು ಬೇಡಿಕೆ ಬಂದಿದೆ ಅವುಗಳ ಬಗ್ಗೆ ಪರಿಶೀಲನೆಯನ್ನು ಮಾಡಬೇಕಲ್ಲ

**ಉಪಾಧ್ಯಕ್ಷರು** ಈ ವಿಷಯ ಏಕೋ ಬಹಳ ಸಮಸ್ಯೆಗಳನ್ನೊಳಗೊಂಡಂತಿದೆ ಆದುದರಿಂದ ಇದನ್ನು ಅರ್ಧ ಗಂಟೆ ಕಾಲಾವಧಿ ಚರ್ಚೆಗೆ ತೆಗೆದುಕೊಳ್ಳೋಣ

**ಶ್ರೀ ಆರ್ ವಿ ದೇಶಪಾಂಡೆ** ಮಾನ್ಯ ಸಚಿವರೆ, ತಾವು ದಾಂಡೇಲಿಗೆ ವಿಶೇಷ ತಹಶೀಲ್ದಾರ್‌ರನ್ನು ನೇಮಕ ಮಾಡುತ್ತೇನೆಂದು ಹೇಳಿದ್ದಿರಿ ದಾಂಡೇಲಿಯನ್ನು ತಾಲ್ಲೂಕನ್ನಾಗಿ ಮಾಡುವ ಬಗ್ಗೆಯೂ ತಾವು ಪರಿಶೀಲಿಸಿ ಕ್ರಮ ತೆಗೆದುಕೊಳ್ಳುತ್ತೇನೆಂದು ಹೇಳಿದ್ದೀರಿ ಕಡೇಪಕ್ಷ ತಕ್ಷಣಕ್ಕೆ ದಾಂಡೇಲಿಗೆ ವಿಶೇಷ ತಹಶೀಲ್ದಾರ್‌ರನ್ನು ಹಾಕಲು ವ್ಯವಸ್ಥೆ ಮಾಡಿ ದಾಂಡೇಲಿಯನ್ನು ತಾಲ್ಲೂಕು ಮಾಡಬೇಕೆಂದು ನಾನು ತಮ್ಮಲ್ಲಿ ವಿನಂತಿ ಮಾಡುತ್ತೇನೆ

**ಶ್ರೀ ಜಗದೀಶ್ ಶೆಟ್ಟರ್** ಮಾನ್ಯ ಉಪಾಧ್ಯಕ್ಷರೆ, ಎಲ್ಲೆಲ್ಲಿ ಈಗ ವಿಶೇಷ ತಹಶೀಲ್ದಾರ್‌ರನ್ನು ನೇಮಕ ಮಾಡಬೇಕೆಂದು ಬೇಡಿಕೆ ಬಂದಿದೆ ಅಲ್ಲಿಯ ಕೆಲಸದ ಒತ್ತಡ, ಅಲ್ಲಿರುವ ಕಾರ್ಯದ ಒತ್ತಡದ ಮೇಲೆ ನಾವು ವಿಶೇಷ ತಹಶೀಲ್ದಾರ್‌ರನ್ನು ನೇಮಕ ಮಾಡುತ್ತೇವೆ ಕೊಟ್ಟೂರಿನದಾಗಲಿ, ದಾಂಡೇಲಿಯದಾಗಲಿ ಒಟ್ಟಾರೆ ಎಲ್ಲೆಲ್ಲಿ ಬೇಡಿಕೆ ಬಂದಿದೆ ಅದರ ಬಗ್ಗೆ ನಾವು ಪರಿಶೀಲನೆ ಮಾಡುತ್ತೇವೆ

**ಉಪಾಧ್ಯಕ್ಷರೆ** ಈಗಾಗಲೇ ಈ ವಿಷಯವನ್ನು ಅರ್ಧ ಗಂಟೆ ಕಾಲಾವಧಿ ಚರ್ಚೆಯಡಿಯಲ್ಲಿ ತೆಗೆದುಕೊಳ್ಳುತ್ತೇವೆಂದು ಹೇಳಿದ್ದೇನೆ ಆದುದರಿಂದ ಈ ವಿಷಯದ ಮೇಲೆ ಚರ್ಚೆ ಮುಕ್ತಾಯ ಮಾಡಿ

**ಶ್ರೀ ವಾಟಾಳ್ ನಾಗರಾಜ್** ಮಾನ್ಯ ಉಪಾಧ್ಯಕ್ಷರೆ, ಹಾಗಾದರೆ ಈ ವಿಷಯ ಚರ್ಚೆಗೆ ಇನ್ಯಾವತ್ತು ಬರುತ್ತದೋ ಗೊತ್ತಿಲ್ಲ ಏಕೆಂದರೆ ಅರ್ಧ ಗಂಟೆ ಕಾಲಾವಧಿ ಚರ್ಚೆಯ ಮೇಲೆ ತೆಗೆದುಕೊಳ್ಳುತ್ತೇವೆಂದರೆ ಅದು ಇನ್ಯಾವತ್ತು ಬರುತ್ತದೋ, ಒಂದು ರೀತಿಯಲ್ಲಿ ಶವಾಗಾರಕ್ಕೆ ಹೋದಂತಾಗುತ್ತದಷ್ಟೆ

**ಉಪಾಧ್ಯಕ್ಷರು** ವಾಟಾಳ್ ನಾಗರಾಜ್‌ರವರೆ, ಆ ರೀತಿಯ ಅನುಮಾನವನ್ನು ಇಟ್ಟುಕೊಳ್ಳಬೇಡಿ ಆದಷ್ಟು ಬೇಗ ಸದರಿ ವಿಷಯವನ್ನು ಚರ್ಚೆಗೆ ತರೋಣ ಈಗ ಎಲ್ಲರೂ ಕುಳಿತುಕೊಳ್ಳಿ ಮಹದೇವಪ್ಪನವರೇ ತಾವು ಶುರುಮಾಡಿ, ತಾವು ಪ್ರಶ್ನೆ ಕೇಳಿ

**ರಾಮದುರ್ಗ ತಾಲ್ಲೂಕಿನ ರೇಷ್ಮೆ ಇಲಾಖೆಗೆ ಸಿಬ್ಬಂದಿ ಒದಗಿಸುವುದು**

162 (944) ಶ್ರೀ ಯಾದವಾಡ್ ಮಹಾದೇವಪ್ಪ ಶಿವಲಿಂಗಪ್ಪ ಮಾನ್ಯ ಮುಖ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವವರೆ?

ಅ) ಬೆಳಗಾವಿ ಜಿಲ್ಲೆ ರಾಮದುರ್ಗ ತಾಲ್ಲೂಕಿನಲ್ಲಿ 2004–05, 2005–06 ಮತ್ತು 2007ನೇ ಸಾಲಿನಲ್ಲಿ ರೇಷ್ಮೆ ಬೆಳೆಯುವ ಪ್ರದೇಶ ಎಷ್ಟು (ವರ್ಷವಾರು ವಿವರ ನೀಡುವುದು),